## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,  ಮೈಸೂರು.

## Spl.C. 156/2021

**P.W.-1**
**C.W.-1**

| | | |
|---|---|---|
| ಹೆಸರು | : | ಬಸವರಾಜು ಹೆಚ್ ಸಿ |
| ತಂದೆಯ ಹೆಸರು | : | ಲೇಃ ಚೆನ್ನಬಸಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಚಾಲಕ ಮತ್ತು ನಿರ್ವಾಹಕ , ಕೆ ಎಸ್ ಆರ್ ಟಿ ಸಿ |
| ವಾಸಸ್ಥಳ | : | ಮೈಸೂರು |

**ದಿನಾಂಕಃ   17-01-2024  ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

ನಾನು 2005 ನೇ ಸಾಲಿನಲ್ಲಿ ಕೆ ಎಸ್ ಆರ್ ಟಿ ಸಿ ಯಲ್ಲಿ ಚಾಲಕ ಮತ್ತು ನಿರ್ವಾಹಕನಾಗಿ ನೇಮಕ ಗೊಂಡಿರುತ್ತೇನೆ. ನನ್ನದು ಎರಡು ವರ್ಷದ ಪ್ರೊಬೇಷನರಿ ಅವಧಿ ಇತ್ತು. ಸದರಿ ಅವಧಿ 2007 ರಲ್ಲಿ ಮುಗಿದಿತ್ತು. 2011 ರಲ್ಲಿ ನನ್ನ ಹುದ್ದೆಯನ್ನು ಖಾಯಂಗೊಳಿಸಿದರು. ನಂತರದಲ್ಲಿ ನನಗೆ ಇನ್ಕ್ರಿಮೆಂಟ್ ಬರಬೇಕಾಗಿತ್ತು. 2011 ರಿಂದ 2019 ರವರೆಗಿನ ಬಾಕಿ Increment ಬರಬೇಕಾಗಿತ್ತು. ಆ ಹಣ ನನಗೆ ಬಂದಿರಲಿಲ್ಲ. ಆದ್ದರಿಂದ ನಮ್ಮ ಘಟಕದ ಅಕೌಂಟ್ಸ್ ಸೂಪರ್ ವೈಸರ್ ಆದ ಮಂಜುನಾಥ ಅಂದರೆ ಆರೋಪಿಯನ್ನು ಭೇಟಿ ಮಾಡಿ ಕೇಳಿದೆ. ಆಗ ಅವರು, 'ಆಯಿತು , ಮಾಡಿಕೊಡುತ್ತೇನೆ 'ಎಂದು ಹೇಳಿದರು.  ನಂತರವೂ ನನ್ನ ಬಾಕಿ ಇನ್ಕ್ರಿಮೆಂಟ್ ಬರಲಿಲ್ಲ. ಹೀಗಾಗಿ ಪುನಃ ಅವರನ್ನು ಹೋಗಿ ಭೇಟಿ ಮಾಡಿದೆ.  ಆಗ ಅವರು 'ನನಗೆ ಹಣ

ಕೊಡಬೇಕಾಗುತ್ತದೆ , ನಿನ್ನ ಅರಿಯರ್ಸ್ಸ ಬರುತ್ತದೆ 'ಎಂದರು. ನಂತರ ಹಲವಾರು ಬಾರಿ ಆರೋಪಿಯನ್ನು ಈ ಸಂಬಂಧ ಭೇಟಿ ಮಾಡಿದ್ದೆ. ದಿಃ 09.07.2019 ರಂದು ಆರೋಪಿ ಮಂಜುನಾಥ ಅವರ ಮೊಬೈಲ್ ಸಂಖ್ಯೆ 7975626919 ರಿಂದ ನನ್ನ ಮೊಬೈಲ್ ಸಂಖ್ಯೆ 6362681669 ಗೆ ಫೋನ್ ಮಾಡಿ 'ನಿನ್ನ ಅರಿಯಸ್ಸ ಚೆಕ್ ರೆಡಿ ಇದೆ , ನೀನು ನನಗೆ ಹತ್ತುಸಾವಿರ ರೂ ಕೊಟ್ಟು ಇದನ್ನು ಕಲೆಕ್ಟ ಮಾಡಿಕೋ , ನಾಳೆ ಸಿಟಿ ಬಸ್ಸ ಸ್ಯಾಂಡ್ ನಲ್ಲಿ ಸಿಗುತ್ತೇನೆ'ಎಂದು ಹೇಳಿದರು. ಈ ಸಂಭಾಷಣೆಯನ್ನು ನಾನು ನನ್ನ ಮೊಬೈಲ್ ನಲ್ಲಿ ರೆಕಾರ್ಡ ಮಾಡಿಕೊಂಡೆ. ನನ್ನ ಬಳಿಯಲ್ಲಿ ಆತ ಕೇಳಿದಷ್ಟು ರೂ. ಹತ್ತು ಸಾವಿರ ಇರಲಿಲ್ಲ. ಆದ್ದರಿಂದ ನಾನು ಎಸಿಬಿ ಕಛೇರಿಗೆ ಹೋಗಿ , ದೂರನ್ನು ಕೊಟ್ಟೆ . ಸದರಿ ದೂರನ್ನು ನಾನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ನಿಪಿ 1 ಎಂತಲು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 1(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ನಾನು ದೂರನ್ನು ಕೊಡುವಾಗ ಅಲ್ಲಿ ಡಿ ವೈ ಎಸ್ ಪಿ ಮಂಜುನಾಥ ಸರ್ ಇದ್ದರು. ಈ ದೂರನ್ನು ನೀಡುವಾಗ ಅದರೊಂದಿಗೆ ವಿಭಾಗೀಯ ಸಿಬ್ಬಂದಿ ಆದೇಶ ಸಂಖ್ಯೆ 619/17 ಮತ್ತು 21/19 ಗಳನ್ನು ಲಗತ್ತಿಸಿ ನೀಡಿದ್ದೆ.

2. ನಂತರ ಪೋಲೀಸ್ ನಿರೀಕ್ಷಕರಾದ ಶೇಖರ್ ರವರು ಐಟಿಐ ಕಾಲೇಜಿನಿಂದ ಇಬ್ಬರು ಅಧಿಕಾರಿಗಳನ್ನು ಕರೆಯಿಸಿದರು. ಅವರ ಹೆಸರುಗಳು ವಸೀ ಅಹಮದ್ ಖಾನ್ ಮತ್ತು ಕೆ ಎಸ್ ದೇವೇಗೌಡ ಎಂದು. ಅವರುಗಳು ಬಂದಾಗ ಪೋಲೀಸ್ ನಿರೀಕ್ಷಕರು ನನ್ನನ್ನು ಅವರಿಗೆ ಪರಿಚಯಿಸಿದರು. ನಂತರ ನಾನು ಕೊಟ್ಟಿದ್ದ ದೂರಿನ ಜೆರಾಕ್ಸ್ ಪ್ರತಿಯನ್ನು ಅವರುಗಳಿಗೆ ನೀಡಿ ಓದಿಕೊಳ್ಳಲು ಹೇಳಿದರು. ಅವರು ಓದಿ ಕೊಂಡರು. ವಸೀ ಅಹಮದ್ ಖಾನ್ ರವರನ್ನು ಪಂಚ

ಸಾಕ್ಷಿ 1 ಎಂತಲು ಮತ್ತು ಕೆ ಎಸ್ ದೇವೇಗೌಡ ರವರನ್ನು ಪಂಚ ಸಾಕ್ಷಿ 2 ಎಂತಲು ಹೆಸರಿಸಿದರು. ಅವರಿಬ್ಬರು ಅದಕ್ಕೆ ಒಪ್ಪಿದರು. ನಂತರ ನಾನು ಅಲ್ಲಿ 500 ರೂ ಮುಖ ಬೆಲೆಯ 20 ನೋಟುಗಳನ್ನು ಹಾಜರುಪಡಿಸಿದೆ. ಆ ಹಣವನ್ನು ಪಂಚ ಸಾಕ್ಷಿ 1 ರವರಿಗೆ ನೀಡಲು ಹೇಳಿದರು. ನಾನು ಅವರಿಗೆ ನೀಡಿದೆ. ಪಂಚ ಸಾಕ್ಷಿ 1 ರವರು ಸದರಿ ನೋಟುಗಳನ್ನು ಎಣಿಸಿ , ಅವುಗಳ ಮೇಲಿದ್ದ ನಂಬರ್ ಗಳನ್ನು ಓದಿ ಹೇಳಿದಂತೆ ಪಂಚ ಸಾಕ್ಷಿ 2 ರವರು ಅದನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದುಕೊಂಡರು. ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಅದು ದೋ.ಪಟ್ಟಿಯ ಪುಟ ಸಂಖ್ಯೆ 47 ರಲ್ಲಿ ಇದ್ದು ಅದನ್ನು ನಿಪಿ 2 ಎಂತಲು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 2(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು.

3. ನಂತರ ಎಸಿಬಿ ಸಿಬ್ಬಂದಿಯವರು ಆ ನೋಟುಗಳನ್ನು ಒಂದು ಹಾಳೆಯ ಮೇಲೆ ಪ್ರತ್ಯೇಕವಾಗಿ ಇಟ್ಟು ಎಲ್ಲಾ ನೋಟುಗಳಿಗೂ ಫಿನಾಫ್ತಲೀನ್ ಪುಡಿಯನ್ನು ಲೇಪಿಸಿದರು. ನಂತರ ಪುನಃ ಆ ಹಣವನ್ನು ಪಂಚ ಸಾಕ್ಷಿ 1 ರವರಿಗೆ ನೀಡಿದರು. ಈಗಾಗಲೇ ಪಂಚ ಸಾಕ್ಷಿ 2 ರವರು ಪ್ರತ್ಯೇಕವಾದ ಹಾಳೆಯಲ್ಲಿ ಬರೆದುಕೊಂಡಿದ್ದ ಸಂಖ್ಯೆಗಳೊಂದಿಗೆ ಹೋಲಿಸಿ ನೋಡಿ ಖಚಿತಪಡಿಸಿಕೂಂಡರು. ನಂತರ ಪಂಚ ಸಾಕ್ಷಿ 1 ರವರು ಸದರಿ ನೋಟುಗಳನ್ನು ನನ್ನ ಶರ್ಟ ನ ಎಡ ಭಾಗದ ಜೇಬಿನಲ್ಲಿ ಇರಿಸಿದರು. ಇಡುವ ಮುಂಚೆ ನನ್ನ ಜೇಬಿನಲ್ಲಿ ಬೇರೆ ಯಾವುದೇ ವಸ್ತುಗಳು ಇರುವುದಿಲ್ಲ ಎನ್ನುವುದನ್ನು ಖಚಿತಪಡಿಸಿಕೊಂಡರು. ಹಾಗೆ ಇಡುವಾಗ ಪಿಐ ರವರು, ಇದನ್ನು ಆರೋಪಿ ಕೇಳಿದಾಗ ಮಾತ್ರವೇ ಕೊಡಬೇಕು, ಅದಕ್ಕೂ ಮುನ್ನ ಮುಟ್ಟಬಾರದು ಎಂದು ತಿಳಿಸಿದ್ದರು. ಉಳಿದ ಫಿನ್ತಾಪ್ತಿಲೀನ್ ಪುಡಿಯನ್ನು ಪ್ರತ್ಯೇಕ ಕವರ್ ನಲ್ಲಿ ಹಾಕಿ ಸೀಲು ಮಾಡಿ ಅಮಾನತ್ತು ಪಡಿಸಿಕೊಂಡರು. ಹಣವನ್ನು ಆರೋಪಿ ಕೇಳಿದ ನಂತರ ನಾನು ಆತನಿಗೆ

ಕೊಟ್ಟ ಮೇಲೆ ,ಕಛೇರಿಯಿಂದ ಹೊರಬಂದು ನನ್ನ ಬಲ ಗೈನಿಂದ ತಲೆ ಸವರಿಕೊಳ್ಳುವ ಮೂಲಕ ಸನ್ನೆಯನ್ನು ನೀಡಬೇಕೆಂದು ತನಿಖಾಧಿಕಾರಿ ತಿಳಿಸಿದರು. ಅಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ ಪಂಚ ಸಾಕ್ಷಿ 1 ರವರ ಎರಡೂ ಕೈಗಳ ಬೆರಳುಗಳನ್ನು ಅದರಲ್ಲಿ ಅದ್ದಿಸಿದರು. ಆಗ ಅದು ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು. ನಂತರ ಆ ಬಣ್ಣದ ದ್ರಾವಣ ವನ್ನು ಒಂದು ಬಾಟಲಿಗೆ ಹಾಕಿ ಸೀಲು ಮಾಡಿ ಅಮಾನತ್ತು ಪಡಿಸಿಕೊಂಡರು. ಈ ನೋಡುತ್ತಿರುವ ಸೀಲು ಮಾಡಿರುವ ತಿಳಿ ಗುಲಾಬಿ ಬಣ್ಣ ವಿರುವ ಬಾಟಲಿಯನ್ನು ಆ ದಿನ ಅಮಾನತ್ತು ಪಡಿಸಿಕೊಂಡಿದ್ದರು. ಅದನ್ನು ಬೀರುವಿನಲ್ಲಿ ಇಟ್ಟರು. ಸೋಡಿಯಂ ಕಾರ್ಬೋನೇಟ್ ದ್ರಾವಣದ ಸ್ಯಾಂಪಲ್ ನ್ನು ಪಡೆದುಕೊಂಡರು. ಸದರಿ ದ್ರಾವಣವಿರುವ ಬಾಟಲಿಯನ್ನು ಈಗ ನೋಡುತ್ತಿದ್ದೇನೆ. ಅದನ್ನು ಎಂಒ 2 ಎಂದು ಗುರುತುಪಡಿಸಿಕೊಳ್ಳಲಾಯಿತು. ನನ್ನ ಮೊಬೈಲ್ ನ ಮೆಮೋರಿ ಚಿಪ್ಪನ್ನು ತನಿಖಾಧಿಕಾರಿಯವರಿಗೆ ನೀಡಿದೆ. ಅದನ್ನು ಕಾರ್ಡ ರೀಡರ್ ಮೂಲಕ ಲ್ಯಾಪ್ ಟಾಪ್ ಗೆ ಅಳವಡಿಸಿ ಅದರಲ್ಲಿ ಇದ್ದ ಸಂಭಾಷಣೆಯನ್ನು ಕೇಳಿಸಿದರು. ನಂತರ ಆ ಸಂಭಾಷಣೆಯನ್ನು ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿದರು. ಆ ಸಂಭಾಷಣೆಯನ್ನು ಎರಡು ಸಿಡಿ ಗಳಿಗೆ ವರ್ಗಾಯಿಸಿದರು. ನಂತರ ನನಗೆ ಒಂದು ಡಿಜಿಟಲ್ ವಾಯ್ಸ ರೆಕಾರ್ಡರ್ ನ್ನು ನೀಡಿ , ಹಣವನ್ನು ಆರೋಪಿಗೆ ನೀಡುವಾಗ ನಡೆಯುವ ಸಂಭಾಷಣೆಯನ್ನು ರೆಕಾರ್ಡ ಮಾಡಿಕೊಳ್ಳಬೇಕು ಎಂದು ತಿಳಿಸಿದರು ಹಾಗೂ ಸದರಿ ವಾಯ್ಸ ರೆಕಾರ್ಡರ್ ನ್ನು ಹೇಗೆ ಉಪಯೋಗಿಸಬೇಕು ಎನ್ನುವುದನ್ನು ಹೇಳಿಕೊಟ್ಟರು. ನಾನು ತನಿಖಾಧಿಕಾರಿಯವರಿಗೆ ನೀಡಿದ್ದ ನನ್ನ ಮೊಬೈಲ್ ನ ಮೆಮೋರಿ ಚಿಪ್ಪನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಎಂ ಒ 3 ಎಂದು ಗುರುತುಪಡಿಸಿಕೊಳ್ಳಲಾಯಿತು. ಅದು Motto Android

Mobile ಆಗಿತ್ತು. ಅದನ್ನು ಉಪಯೋಗಿಸುವ , ಅದರಲ್ಲಿ ರೆಕಾರ್ಡ ಮಾಡುವ ಬಗ್ಗೆ ನನಗೆ ಗೊತ್ತಿತ್ತು. ಈ ಮೇಲ್ಕಂಡ ಎಲ್ಲಾ ಪ್ರಕ್ರಿಯಗಳು ನಡೆಯುತ್ತಿದ್ದ ಸಂಧರ್ಗಳಲ್ಲಿ ಪೋಟೋಗಳನ್ನು ತೆಗೆಯುತ್ತಿದ್ದರು. ಆಗ ಅಲ್ಲಿ ತೆಗೆದ ಪೋಟೋಗಳನ್ನು ಈಗ ನೋಡುತ್ತಿದ್ದೇನೆ. ಅವು ಒಟ್ಟು 9 ಪೋಟೋಗಳು ಇದ್ದು, ಅವುಗಳನ್ನು ನಿಪಿ 3 ರಿಂದ 11 ಎಂದು ಗುರುತುಪಡಿಸಿಕೊಳ್ಳಲಾಯಿತು.

4. ತನಿಖಾಧಿಕಾರಿಯವರು ಪಂಚ ಸಾಕ್ಷಿ 2 ರವರನ್ನು ನನ್ನ ಜೊತೆಯಲ್ಲಿಯೇ ಇರಲು ಹೇಳಿ ನಡೆಯುವ ಎಲ್ಲಾ ವಿಧ್ಯಮಾನಗಳನ್ನು ಗಮನಿಸಬೇಕು ಎಂದು ಅವರಿಗೆ ತಿಳಿಸಿದರು. ಈ ಎಲ್ಲಾ ಪ್ರಕ್ರಿಯಗಳ ಬಾಬ್ತು ಎಸಿಬಿ ಕಛೇರಿಯಲ್ಲಿ ಮಹಜರ್ ನ್ನು ಮಾಡಿದರು. ಸದರಿ ಮಹಜರ್ ನ್ನು ಮಧ್ಯಾಹ್ನ 01.10 ರಿಂದ 03.00 ಗಂಟೆಯವರೆಗೂ ಬರೆದರು. ಸದರಿ ಮಹಜರ್ ಗೆ ನಾನು ಸಹಿ ಹಾಕಿರುತ್ತೇನೆ. ಸದರಿ ಮಹಜರ್ ನ್ನು ನಿಪಿ 12 ಎಂತಲು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 12(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು.

5. ನಂತರ ಇಲಾಖಾ ವಾಹನದಲ್ಲಿ ಎಸಿಬಿ ಕಛೇರಿಯಿಂದ ಮೈಸೂರಿನ ಸಿಟಿ ಬಸ್ಸ ಸ್ಟಾಂಡ್ ಗೆ ಹೋದೆವು. ಅಲ್ಲಿ ಸಿಟಿ ಬಸ್ಸ ಸಾಟಂಡ್ ನಿಂದ ಸ್ವಲ್ವ ದೂರಲ್ಲಿ ವಾಹನವನ್ನು ನಿಲ್ಲಿಸಿ , ತನಿಖಾಧಿಕಾರಿಯವರು ನನ್ನನ್ನು ಮತ್ತು ಪಂಚ ಸಾಕ್ಷಿ 2 ರವರನ್ನು ಕಳುಹಿಸಿ ಆರೋಪಿಯನ್ನು ಭೇಟಿ ವಾಡಲುಹೇಳಿದರು. ಹಾಗೆ ನಾವು ಹೊರಟಾಗ, ನಾನು ಆರೋಪಿಗೆ ಫೋನ್ ಮಾಡಿದೆ. ಆಗ ಆರೋಪಿ , ನಾನು ಸಿಟಿ ಬಸ್ಸ ಸ್ಯಾಂಡ್ ನಲ್ಲಿ ಇಲ್ಲ , ರಾಮಸ್ವಾಮಿ ಸರ್ಕಲ್ ನಲ್ಲಿ ಇದ್ದೇನೆ , ಬರುತ್ತೀಯಾ ಎಂದು ಕೇಳಿದರು. ಆಗ ನಾನು, ಬರುತ್ತೇನೆ ಎಂದೆ. ಪುನಃ ಆರೋಪಿಗೆ ನಾನೇ ಫೋನ್ ಮಾಡಿ, ಅಲ್ಲಿಗೆ ಬರಲು ಆಗುವುದಿಲ್ಲ , ನೀವೇ ಸಿಟಿ ಬಸ್ಸ ಸ್ಟಾಂಡ್ ಗೆ ಬನ್ನಿ ಎಂದು

ಹೇಳಿದೆ. ಆಗ ಆರೋಪಿ ,ಇನ್ನು ಅರ್ಧಗಂಟೆಯಲ್ಲಿ ಬರುತ್ತೇನೆ ಎಂದರು. ನಂತರ ಆರೋಪಿಯೇ ನನಗೆ ಪೋನ್ ಮಾಡಿ , ಬನ್ನಿ ಮಂಟಪದ ಕೆ ಎಸ್ ಆರ್ ಟಿ ಸಿ ಗ್ರಾಮಾಂತರ ಘಟಕ 2 ಕ್ಕೆ ಬನ್ನಿ , 5.00 ಗಂಟೆಗೆ ನಾನು ಅಲ್ಲಿ ಇರುತ್ತೇನೆ ಎಂದರು. ಈ ವಿಷಯವನ್ನು ನಾನು ತನಿಖಾಧಿಕಾರಿಗೆ ತಿಳಿಸಿದೆ. ನಂತರ ಎಲ್ಲರೂ ವಾಪಾಸ್ಸು ಎಸಿಬಿ ಠಾಣೆಗೆ ಬಂದೆವು. ಸಂಜೆ 04.20 ರ ವರೆಗೆ ಎಲ್ಲರೂ ಆ ಕಛೇರಿಯಲ್ಲಿ ಇದ್ದೆವು.

6. ಸಂಜೆ 04.20 ಕ್ಕೆ ನಾನು ಆರೋಪಿಗೆ ಪೋನ್ ಮಾಡಿದೆ. ಆಗ ಆತ , ಇನ್ನೂ ಅರ್ಧ ಗಂಟೆಯಲ್ಲಿ ಡಿಪೋಗೆ ಬರುತ್ತೇನೆ , ನೀನು ಡಿಪೋ ಒಳಗಡೆ ಇರು , ಎಂದು ಹೇಳಿದರು. ಈ ವಿಷಯವನ್ನು ನಾನು ತನಿಖಾಧಿಕಾರಿಯವರಿಗೆ ತಿಳಿಸಿದೆ. ನಂತರ ಇಲಾಖಾ ವಾಹನದಲ್ಲಿ ಎಲ್ಲರು ಘಟಕ 2 ರ ಬಳಿಗೆ ಹೋದೆವು. ನಂತರ ನಾನು ಪುನಃ ಆರೋಪಿಗೆ ಪೋನ್ ಮಾಡಿದೆ. ಆಗ ಆತ, ಘಟಕ 2 ರ ಎದುರುಗಡೆ ಇರುವ ಹೊಟೆಲ್ ಭಾರ್ಗವ ದಲ್ಲಿ ಇರು , ನಾನು ಅಲ್ಲಿಗೆ ಬರುತ್ತೇನೆ ಎಂದರು. ನಂತರ ನಾನು ಮತ್ತು ಪಂಚ ಸಾಕ್ಷಿ 2 ಹೊಟೆಲ್ ಭಾಗರ್ವಕ್ಕೆ ಹೋದೆವು. ತನಿಖಾಧಿಕಾರಿ ಮತ್ತು ಉಳಿದವರು ಆ ಹೊಟೆಲ್ ನ ಸುತ್ತ ಮುತ್ತ ಅಲ್ಲೆಲ್ಲೇ ನಿಂತಿದ್ದರು.

7. ಸಂಜೆ 05.00 ಗಂಟೆಗೆ ಆರೋಪಿ ಆ ಹೊಟೆಲ್ ಗೆ ಬಂದರು. ಗಾಡಿ ನಿಲ್ಲಿಸಿ ಆರೋಪಿ ಹೊಟೆಲ್ ಒಳಗೆ ಬಂದರು. ನಾವು ಟೀಗೆ ಆರ್ಡರ್ ಮಾಡಿದೆ. ನಾವ್ಬಿಬರು ಟೀ ಕುಡಿಯುವಾಗ ಪಂಚ ಸಾಕ್ಷಿ 2 ರವರು ನನ್ನ ಪಕ್ಕದಲ್ಲೇ ನಿಂತಿದ್ದರು. ಆ ಸಮಯದಲ್ಲಿ ನಾನು ವಾಯ್ಸು ರೆಕಾರ್ಡರ್ ನ್ನು ಆನ್ ಮಾಡಿಕೊಂಡಿದ್ದೆ. ನಾನು ಅಮಾನತ್ತು ಅವಧಿಯಲ್ಲಿ ಇದ್ದಂತಹ ಅರ್ಧ ಸಂಬಳದ ಬಗ್ಗೆ ಮಾತನಾಡುತ್ತಿದ್ದೆವು. ನಂತರ ನನ್ನ ಚೆಕ್ಕಿನ ಸಂಬಂಧ ಮಾತನಾಡಿದೆ. ಆಗ ಆರೋಪಿ ಕೈ ಸನ್ನೆ ಮಾಡಿ ಹಣಕ್ಕಾಗಿ ಕೇಳಿದರು. ಆಗ ನಾನು ನನ್ನ ಶರ್ಟ ನ ಜೇಬಿನಿಂದ

ಹಣವನ್ನು ನನ್ನ ಬಲಗೈ ನಿಂದ ತೆಗೆದು ಆರೋಪಿಗೆ ಕೊಟ್ಟೆ. ಆರೋಪಿ ಅದನ್ನು ತೆಗೆದುಕೊಂಡು ಎರಡೂ ಕೈಗಳಲ್ಲಿ ಎಣಿಸಿ , ಒಂದು ಪೇಪರ್ ನಲ್ಲಿ ಸುತ್ತಿ , ಎಡಗೈನಿಂದ ಅದನ್ನು ಆತನ ಪ್ಯಾಂಟ್ ನ ಎಡ ಜೇಬಿನಲ್ಲಿ ಇರಿಸಿಕೂಂಡರು. ನಂತರ ನಾನು ಹೊಟೆಲ್ ನಿಂದ ಹೊರ ಬಂದು ತನಿಖಾಧಿಕಾರಿಯವರಿಗೆ ಸನ್ನೆ ಮಾಡಿದೆ. ಆಗ ಅವರು ನನ್ನ ಹತ್ತಿರಕ್ಕೆ ಬಂದರು. ನಾನು ಅವರಲ್ಲಿ , ಆರೋಪಿಗೆ ಹಣ ಕೊಟ್ಟಿದ್ದೇನೆ ಎಂದು ತಿಳಿಸಿದೆ. ಆ ಸಮಯದಲ್ಲಿ ಆರೋಪಿ ಹೊಟೆಲ್ ನಿಂದ ಹೊರಗಡೆ ಬರುತ್ತಿದ್ದರು. ಆಗ ಅವರನ್ನು ತನಿಖಾಧಿಕಾರಿಗೆ ತೋರಿಸಿ , ಇವರೇ ಮಂಜುನಾಥ , ಅಕೌಂಟ್ ಸೂಪರ್ ವೈಸರ್ ಎಂದು ತಿಳಿಸಿದರು. ಆಗ ಆರೋಪಿಯ ಎರಡೂ ಕೈಗಳನ್ನು ಎಸಿಬಿ ಸಿಬ್ಬಂದಿಯವರು ಹಿಡಿದುಕೂಂಡರು. ಆರೋಪಿ ಮಂಜುನಾಥ ಇಂದು ನ್ಯಾಯಾಲಯದ ಮುಂದಿದ್ದಾರೆ. ಆ ಹೊಟೆಲ್ ಬಹಳ ಚಿಕ್ಕದಿತ್ತು. ಅಲ್ಲಿ ಮಹಜರ್ ಮಾಡಲು ಆಗುತ್ತಿರಲಿಲ್ಲ. ಆದ್ದರಿಂದ ಆರೋಪಿಯನ್ನು ಹಾಗೂ ನಮ್ಮೆಲ್ಲರನ್ನು ಕರೆದುಕೊಂಡು ಎದುರುಗಡೆ ಇದ್ದಂತಹ ಆರೋಪಿಯ ಕಛೇರಿಗೆ ಕರೆದುಕೊಂಡು ಬಂದರು. ಆ ಕಛೇರಿಯಲ್ಲಿ ಎಸಿಬಿ ಸಿಬ್ಬಂದಿಯವರು ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿದರು. ಮೊದಲು ಆರೋಪಿಯ ಬಲಗೈ ಬೆರಳುಗಳನ್ನು ಆ ದ್ರಾವಣದಲ್ಲಿ ಅದ್ದಿಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಪ್ರತ್ಯೇಕ ಬಾಟಲಿನಲ್ಲಿ ಶೇಖರಿಸಿ ಮುಚ್ಚಿ ,ಬಟ್ಟೆಯಿಂದ ಸುತ್ತಿ , ದಾರ ಕಟ್ಟಿ , ಸೀಲು ಮಾಡಿ ಅಮಾನತ್ತು ಪಡಿಸಿಕೊಂಡರು. ಅದನ್ನು ಸದರಿ ದ್ರಾವಣವಿರುವ ಬಾಟಲಿಯನ್ನು ಈಗ ನೋಡುತ್ತಿದ್ದೇನೆ. ಅದನ್ನು ಎಂ ಒ 4 ಎಂದು ಗುರುತುಪಡಿಸಿಕೊಳ್ಳಲಾಯಿತು.

8. ನಂತರ ಆರೋಪಿಯ ಎಡಗೈ ಬೆರಳುಗಳನ್ನು ಆ ದ್ರಾವಣದಲ್ಲಿ ಅದ್ದಿಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಪ್ರತ್ಯೇಕ ಬಾಟಲಿನಲ್ಲಿ ಶೇಖರಿಸಿ

ಮುಚ್ಚಿಬಟ್ಟೆಯಿಂದ ಸುತ್ತಿ , ದಾರ ಕಟ್ಟಿ, ಸೀಲು ಮಾಡಿ ಅಮಾನತ್ತು ಪಡಿಸಿಕೊಂಡರು. ಅದನ್ನು ಸದರಿ ದ್ರಾವಣವಿರುವ ಬಾಟಲಿಯನ್ನು ಈಗ ನೋಡುತ್ತಿದ್ದೇನೆ. ಅದನ್ನು ಎಂ ಒ 5 ಎಂದು ಗುರುತುಪಡಿಸಿಕೊಳ್ಳಲಾಯಿತು.

9. ನಂತರ ತನಿಖಾಧಿಕಾರಿ ಹಣವನ್ನು ಕೇಳಿದಾಗ ಆರೋಪಿ ತನ್ನ ಎಡಗೈನಿಂದ ಎಡ ಪ್ಯಾಂಟ್ ಜೇಬಿಗೆ ಕೈ ಹಾಕಿ , ಪೇಪರ್ ನಲ್ಲಿ ಸುತ್ತಿದ್ದ ಹಣವನ್ನು ತೆಗೆದು ಕೊಟ್ಟರು. ಅದನ್ನು ಪಂಚ ಸಾಕ್ಷಿ 2 ರವರಿಗೆ ಕೊಟ್ಟರು. ಪಂಚ ಸಾಕ್ಷಿ 1 ಮತ್ತು 2 ರವರು ಈಗಾಗಲೇ ಪ್ರತ್ಯೇಕ ಹಾಳೆಯಲ್ಲಿ ಬರೆದುಕೊಂಡಿದ್ದ ಸಂಖ್ಯೆಗಳೊಂದಿಗೆ ಆ ನೋಟುಗಳ ಸಂಖ್ಯೆಗಳನ್ನು ಹೋಲಿಸಿ ನೋಡಿದಾಗ ಅವು ತಾಳೆಯಾದವು. ನ್ಯಾಯಾಲಯದ ಮುಂದೆ ಸದರಿ ನೋಟುಗಳನ್ನು ನೋಡುತ್ತಿದ್ದೇನೆ. ರೂ.500/- ಮುಖ ಬೆಲೆಯ 20 ನೋಟುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆ ನೋಟುಗಳನ್ನು ಎಂ ಒ 6 ಎಂದು ಗುರುತುಪಡಿಸಿಕೊಳ್ಳಲಾಯಿತು.

10. ಮತ್ತೊಮ್ಮೆ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಆರೋಪಿಗೆ ಬದಲಿ ಪ್ಯಾಂಟ್ ನ ವ್ಯವಸ್ಥೆಯನ್ನು ಮಾಡಿ ಆತ ಧರಿಸಿದ್ದ ಪ್ಯಾಂಟ್ ನ ಎಡ ಜೇಬನ್ನು ಆ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿದಾಗ ಅದು ಯಾವ ಬಣ್ಣಕ್ಕೂ ತಿರುಗಿರುವುದಿಲ್ಲ. ಸದರಿ ದ್ರಾವಣವನ್ನು ಒಂದು ಪ್ರತ್ಯೇಕ ಬಾಟಲಿನಲ್ಲಿ ಶೇಖರಿಸಿ ಮುಚ್ಚಿ ಬಟ್ಟೆಯಿಂದ ದಾರ ಕಟ್ಟಿ, ಸೀಲು ಮಾಡಿ ಅಮಾನತ್ತು ಪಡಿಸಿಕೊಂಡರು. ಅದನ್ನು ನಾನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಎಂ ಒ 7 ಎಂದು ಗುರುತುಪಡಿಸಿಕೊಳ್ಳಲಾಯಿತು.

11. ನಂತರ ನಾನು ವಾಯಸ್ ರೆಕಾರ್ಡರ್ ನ್ನು ತನಿಖಾಧಿಕಾರಿಯವರಿಗೆ ಕೊಟ್ಟೆ ಅವರು ಅದನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ಅದರಲ್ಲಿ ರೆಕಾರ್ಡ ಆಗಿದ್ದ ಸಂಭಾಷಣೆಯನ್ನು ಕೇಳಿಸಿದರು. ನಂತರ ಅದನ್ನು ಮೂರು ಸಿಡಿಗಳಿಗೆ ವರ್ಗಾಯಿಸಿದರು. ಆ ಸಂಭಾಷಣೆಯನ್ನು ಪ್ರತ್ಯೇಕವಾಗಿ ಟೈಪ್ ಮಾಡಿಕೊಂಡರು.

12. ನಂತರ ನನ್ನ ಹಾಗೂ ಆರೋಪಿಯ ಮಾದರಿ ಧ್ವನಿಯನ್ನು ಪಡೆದುಕೊಂಡರು. ಒಂದು ಪ್ರತ್ಯೇಕವಾದ ಹಾಳೆಯಲ್ಲಿ ಬರೆಯಿಸಿ ಅದನ್ನು ಮೂರು ಬಾರಿ ನಮ್ಮಿಂದ ಓದಿಸಿ, ಮಾದರಿ ಧ್ವನಿಯನ್ನು ಪಡೆದುಕೊಂಡರು.

13. ಅಲ್ಲಿದ್ದ ಕೆ ಎಸ್ ಆರ್ ಟಿ ಸಿ ಕಛೇರಿಯ ಸಿಬ್ಬಂದಿ ಸುಲೈಮಾನ್ ಪಾಷ ಎನ್ನುವವರು ನನ್ನ ಚೆಕ್ಕು ಹಾಗೂ ಹಾಜರಾತಿ ರಿಜಿಸ್ಟರ್ ನ್ನು ಹಾಜರುಪಡಿಸಿದರು. ಅವು ದೋಷಾರೋಪಣೆ ಪಟ್ಟಿಯ ಪುಟ ಸಂಖ್ಯೆ 151 ಮತ್ತು 152 ರಲ್ಲಿ ಇದ್ದು, ಹಾಜರಾತಿ ದಾಖಲೆಯನ್ನು ನಿಪಿ 13 ಎಂತಲು, ಚೆಕ್ಕಿನ ನಕಲನ್ನು ನಿಪಿ 14 ಎಂತಲು ಗುರುತುಪಡಿಸಿಕೊಳ್ಳಲಾಯಿತು. ಸದರಿ ಚೆಕ್ಕಿನಲ್ಲಿ ನಮೂದಿಸಿರುವ ರೂ.1,03,617/- ನನ್ನ ಸಂಬಳದ ಅರಿಯಸ್ಸ ಮತ್ತು ಇಂಕ್ರಿಮೆಂಟ್ ಆಗಿರುತ್ತದೆ. ಈ ಮೇಲ್ಕಂಡ ಪ್ರಕ್ರಿಯಗಳು ನಡೆಯುತ್ತಿದ್ದ ಸಂಧರ್ಬದಲ್ಲಿ ಪೋಟೋಗಳನ್ನು ತೆಗೆದರು. ಸದರಿ ಪೋಟೋಗಳನ್ನು ನಾನು ಈಗ ನೋಡುತ್ತಿದ್ದೇನೆ. ಅವುಗಳು ಒಟ್ಟು 9 ಇದ್ದು , ಅವುಗಳನ್ನು ನಿಪಿ 15 ರಿಂದ 23 ಎಂದು ಗುರುತುಪಡಿಸಿಕೊಳ್ಳಲಾಯಿತು.

14. ಈ ಮೇಲ್ಕಂಡ ಎಲ್ಲಾ ಪ್ರಕ್ರಿಯಗಳ ಬಾಬ್ತು ಅಲ್ಲಿ ಮಹಜರ್ ಮಾಡಿ ನಮ್ಮಗಳ ಸಹಿಯನ್ನು ಪಡೆದರು. ಸದರಿ ಮಹಜರ್ ನ್ನು ನಾನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ

ಸಹಿ ಇರುತ್ತದೆ. ಸದರಿ ಮಹಜರ್ ನ್ನು ನಿಪಿ 24 ಎಂತಲು ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 24(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಈ ಸಂಬಂಧ ತನಿಖಾಧಿಕಾರಿಯ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ.

15. ನನಗೆ ನನ್ನ Android Mobile ನ್ನು ಉಪಯೋಗಿಸುವ ಜ್ಞಾನ ಇದ್ದು , ಅದರಲ್ಲಿ ಸಂಭಾಷಣೆಯನ್ನುದಾಖಲಿಸುವ ಜ್ಞಾನವೂ ಇರುತ್ತದೆ ಎನ್ನುವ ಬಾಬ್ತು ಕಲಂ 65(ಬಿ) ಭಾ.ಸಾಕ್ಷ್ಯ ಅಧಿನಿಯಮದಡಿಯಲ್ಲಿ ದೃಡೀಕರಣ ಪತ್ರವನ್ನು ನೀಡಿರುತ್ತೇನೆ. ಅದನ್ನು ನಾನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ 25 ಎಂತಲು ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 25(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು.

16. ತನಿಖಾಧಿಕಾರಿಯವರು ಆರೋಪಿಯು ಹೊಂದಿದ್ದ ಹಣದ ಬಗ್ಗೆ ಸಮಜಾಯಿಶಿಯನ್ನು ಕೇಳಲಾಗಿ ಆತ, ಉದ್ದೇಶಪೂರ್ವಕವಾಗಿ ನಾನು ಈ ರೀತಿ ಮಾಡಿರುತ್ತೇನೆ ಎಂದು ಬರೆದುಕೊಟ್ಟಿದ್ದು , ಅದನ್ನು ನಾನು ಅಲ್ಲಗೆಳೆದಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.